**ಸಾಕ್ಷಿಯನ್ನು ದಿನಾಂಕ:24.07.2026 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀ ಸಿ.ಜಿ.ಅರ್ ವಕೀಲರಿಂದ.**

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದಲ್ಲಿ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸರಿ ಹಾಗೂ ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಗೆ ನಿಪಿ.1 ವಿಲ್ ನ್ನು ಬರೆದಂತಹ ಕೃಷ್ಣಪ್ಪರವರಿಗೆ ಎಷ್ಟು ಜನ ಮಕ್ಕಳು ಎಂದು ನ್ಯಾಯಾಲಯಯು ಪ್ರಶ್ನೆ ಕೇಳಲಾಗಿ, ಸಾಕ್ಷಿಯು ಕೃಷ್ಣಪ್ಪರವರಿಗೆ ಒಟ್ಟು ಮೂರು ಜನ ಮಕ್ಕಳು, ಅವರೆಂದರೆ ಗೋಪಾಲ್, ಅಪ್ಪಣ್ಣ ಮತ್ತು ಗಜಲಕ್ಷ್ಮಿ ಎಂಬ ಮಕ್ಕಳು ಇರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ.5 ನೋಟರಿಕೃತ ವಂಶವೃಕ್ಷವನ್ನು ಪರಿಶೀಲಿಸಲಾಗಿ, ಒಟ್ಟು 5 ಜನ ಮಕ್ಕಳು ಇರುವುದಾಗಿ ಕಂಡುಬಂದಿರುತ್ತದೆ.

1. ಈ ಪ್ರಕರಣದಲ್ಲಿ ಮೃತ ಕೃಷ್ಣಪ್ಪರವರು ಬರೆದಂತಹ ನಿಪಿ.1 ಮರಣ ಶಾಸನ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

2. ಅದೇ ರೀತಿ ಸಾಕ್ಷಿಯು ಮೃತ ಕೃಷ್ಣಪ್ಪರವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.1(ಬಿ) ರಿಂದ ನಿಪಿ.1(ಸಿ) ಎಂದು ಗುರುತಿಸಲಾಯಿತು.

   ಸಾಕ್ಷಿಯು ಮುಂದುವರೆದು ಕೃಷ್ಣಪ್ಪರವರು ನಿಪಿ.1 ನ್ನು ಕೋಲಾರ ತಾಲ್ಲೂಕು ಕಚೇರಿಯಲ್ಲಿ ಬರೆದಿರುತ್ತಾರೆ ಹಾಗೂ ಅದನ್ನು ಬರೆಯುವ ಕಾಲಕ್ಕೆ ಕೃಷ್ಣಪ್ಪ, ಆತನ ಹೆಂಡತಿ ಮುನಿಯಮ್ಮ, ನಾನು ಮತ್ತು ಗೋಪಾಲ್ ಹಾಜರಿದ್ದೆವು ಎಂದು ನುಡಿಯುತ್ತಾರೆ.

   (ಈ ಪ್ರಕರಣದಲ್ಲಿ ಎದುರುದಾರರು ಇಲ್ಲದ ಕಾರಣ, ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**(ಮಾಯಣ್ಣ.ಬಿ.ಎಲ್)**
**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಕೋಲಾರ**